1. ಬೆಳ್ತಂಗಡಿ ತಾಲ್ಲೂಕು ಪ್ರದೇಶದಲ್ಲಿ ಲೋಕೋಪಯೋಗಿ ಇಲಾಖೆ ನಬಾರ್ಡ್ ಯೋಜನೆಯಡಿಯಲ್ಲಿ ಅಭಿವೃದ್ಧಿಪಡಿಸಲು ಯೋಜಿಸಿದ ರಸ್ತೆಗಳು ಮತ್ತು ಸೇತುವೆಗಳು ಯಾವುವು?

2. ಈ ರಸ್ತೆಗಳನ್ನು ಸೇತುವೆಗಳನ್ನು ಅಭಿವೃದ್ಧಿಪಡಿಸಲು ಮುಂಜೂರು ಮಾಡಿದ ಹಣದ ಮೊತ್ತವೆಷ್ಟು ಸದರಿ ಕಾಮಗಾರಿಗಳನ್ನು ನಿಗಧಿತ ಕಾಲದಲ್ಲಿ ಪೂರ್ಣಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

3. ಹೆಚ್ಚು ಗ್ರಾಮಾಂತರ ಪ್ರದೇಶಗಳನ್ನೊಳಗೊಂಡ ಬೆಳ್ತಂಗಡಿ ತಾಲ್ಲೂಕಿಗೆ ಆದ್ಯತೆಯ ಮೇರೆಗೆ ಹೆಚ್ಚುವರು ರಸ್ತೆ ಕಾಮಗಾರಿಗಳನ್ನು ಮಂಜೂರು ಮಾಡಲಾಗುವುದೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :—

1. ಆರ್‌ಐಡಿಎಫ್-6ರಡಿ ನಾರಾದಿ ಪಣಲು ಮರೋಡಿ ರಸ್ತೆ ಮತ್ತು ಮುದ್ದೋಡಿ ಅರಂಬೋಡಿ ರಸ್ತೆ ಕಾಮಗಾರಿಗಳನ್ನು ಸಚಿವ ಸಂಪುಟ ಉಪ ಸಮಿತಿಯು ಗುರುತಿಸಿದೆ.

2. ಇವುಗಳಿಗೆ ಕ್ರಮವಾಗಿ ರೂ. 70 ಲಕ್ಷ ಮತ್ತು ರೂ. 50 ಲಕ್ಷಗಳಿಗೆ ಸಮಿತಿಯು ಗುರುತಿಸಿದೆ. ಈ ಪೈಕಿ ಮುದ್ದೋಡಿ ಅರಂಬೋಡಿ ರಸ್ತೆ ಕಾಮಗಾರಿಯು ನಬಾರ್ಡ್‌ನಿಂದ ರೂ. 42.90 ಲಕ್ಷಗಳಿಗೆ ಅನುಮೋದನೆಯಾಗಿದ್ದು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸಲು ಪ್ರಯತ್ನಿಸಲಾಗುವುದು. ಮತ್ತು ನಾರಾದಿ ಪಣಲು ಮರೋಡಿ ರಸ್ತೆ ಕಾಮಗಾರಿಗೆ ನಬಾರ್ಡ್‌ನಿಂದ ಅನುಮೋದನೆ ಪಡೆಯಬೇಕಿದೆ.

3. ಈ ಬಗ್ಗೆ ಸಚಿವ ಸಂಪುಟ ಉಪ ಸಮಿತಿಯು ನಿರ್ಧರಿಸಬೇಕಿದೆ.

ರಾಜ್ಯದ ಕಡಲುತೀರ ಪ್ರದೇಶಗಳಲ್ಲಿ ಪ್ರವಾಸೋದ್ಯಮದ ಅಭಿವೃದ್ಧಿ.

2255(2700) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) :— ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದ ಸುಮಾರು 300 ಕಿ.ಮೀ. ಉದ್ದದ ಕಡಲು ತೀರದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು? ಹಾಗೂ ಅನ್ವೇಷಣೆಗೆ ಒಳಪಡದ ತೀರ ಪ್ರದೇಶಗಳನ್ನು ಗುರುತಿಸಲಾಗಿದೆಯೇ? ಹೌದಾದಲ್ಲಿ ವಿವರಗಳೇನು?

ಆ) ಕಡಲ ತೀರದ ಪ್ರವಾಸಿ ಸ್ಥಳಗಳನ್ನು ಮೂಲಭೂತ ಸಂಪರ್ಕ ಸೌಲಭ್ಯಗಳಿಂದ ವ್ಯವಸ್ಥೆಗೊಳಿಸುವುದರ ಮೂಲಕ ಈ ಪ್ರದೇಶಗಳು ಅಭಿವೃದ್ಧಿಗೊಳ್ಳುವಂತೆ ಮಾಡಲು ಸರ್ಕಾರದ ಕ್ರಮಗಳೇನು? ಪ್ರಸಕ್ತ ಆಯವ್ಯಯದಲ್ಲಿ ಈ ಕುರಿತಾಗಿ ನಿಗಧಿಪಡಿಸಲಾಗಿರುವ ಹಣವೆಷ್ಟು?

ಶ್ರೀ ಆರ್. ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು) :—

ಅ) ಕರ್ನಾಟಕದ ಕರಾವಳಿ ಉದ್ದಕ್ಕೂ ಸುಮಾರು 20 ಬೀಚುಗಳನ್ನು ಇಲಾಖೆಯು ಗುರುತಿಸಿದೆ. ಸದರಿ ಗುರುತಿಸಲಾಗಿರುವ ಬೀಚುಗಳ ಅಭಿವೃದ್ಧಿಗಾಗಿ ಯೋಜನೆಗಳನ್ನು ಸಿದ್ಧಪಡಿಸಿ ಹಾಗೂ ಅವುಗಳ ಅನುಷ್ಠಾನಕ್ಕೆ ಖಾಸಗಿ ಬಂಡವಾಳ ಸ್ವಾಗತಿಸಲು ಸೂಕ್ತವಾದ ಪ್ರದೇಶಗಳನ್ನು ಗುರುತಿಸಿಕೊಡಲು ಕರಾವಳಿಯ ಮೂರು ಜಿಲ್ಲೆಗಳ ಅಂದರೆ ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ.

ಅಲ್ಲದೇ, ಈ ಬಗ್ಗೆ ಇಡೀ ಕರಾವಳಿತೀರ ಕುರಿತು ಒಂದು ಕಾರ್ಯಸಾಧ್ಯ ಯೋಜನೆಯನ್ನು ತಯಾರಿಸಿ ಕೊಡಲು ರೀಜನಲ್ ಇಂಜಿನಿಯರಿಂಗ್ ಕಾಲೇಜು, ಸೂರತ್‌ಕಲ್ ರವರನ್ನು ಸಂಪರ್ಕಿಸಲಾಗಿದೆ.

ಈ ಕರಾವಳಿ ವಲಯವನ್ನು ಪ್ರವಾಸಿ ಆದ್ಯತೆಯುಳ್ಳ ಪ್ರದೇಶವೆಂದು ಇಲಾಖೆ ಗುರುತಿಸಿದೆ, ಪ್ರವಾಸಿ ಯೋಜನೆಗಳ ಅಭಿವೃದ್ಧಿಗೊಳಿಸಲು ಹಾಗೂ ಪ್ರವಾಸಿ ಯೋಜನೆಗಳನ್ನು ಈ ಬೀಚುಗಳ ಬಳಿ ಕೈಗೊಳ್ಳಲು ಖಾಸಗಿಯವರಿಗೆ ಶೇಕಡ 30 (ರೂ.30.00 ಲಕ್ಷ ಗರಿಷ್ಠ ಮಿತಿ) ವರೆಗೆ ಸಬ್ಸಿಡಿ ಹಾಗೂ ಇತರೆ ರಿಯಾಯಿತಿಗಳನ್ನು ನೀಡಿ ಉತ್ತೇಜಿಸಲಾಗುತ್ತಿದೆ.

ಆ) ಕರಾವಳಿಯ 3 ಜಿಲ್ಲೆಗಳಲ್ಲಿನ ಕೂಡು ರಸ್ತೆ ಹಾಗೂ ಸಂಪರ್ಕ ರಸ್ತೆಗಳನ್ನು ಇಲಾಖೆಯು ಗುರುತಿಸಲಾಗಿದ್ದು, ಈ ರಸ್ತೆಗಳ ಅಭಿವೃದ್ಧಿ ಕಾರ್ಯವನ್ನು ಇಲಾಖೆಯು ನೇರವಾಗಿ ಅಥವಾ ಇತರೆ ಇಲಾಖೆಗಳಾದ ಲೋಕೋಪಯೋಗಿ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್, ಸ್ಥಳೀಯ ಸಂಸ್ಥೆಗಳು, ಇತ್ಯಾದಿಗಳ ಮೂಲಕ ಕೈಗೊಳ್ಳಲು ಯೋಚಿಸಲಾಗುತ್ತಿದೆ.

ರಾಜ್ಯದಲ್ಲಿ ಪ್ರವಾಸೋದ್ಯಮ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಹಾಗೂ ಹಾಲಿ ಇರುವ ಸೌಲಭ್ಯಗಳನ್ನು ಉನ್ನತೀಕರಣಗೊಳಿಸಲು ಸರ್ಕಾರದ ಹುಡ್ಕೋವಿನಿಂದ ರೂ. 100.00 ಕೋಟಿಗಳ ಸಾಲ ಪಡೆಯಲು ಪ್ರಯತ್ನ ಪಡುತ್ತಿದೆ. ಇದರ ಒಂದು ಭಾಗಾಂಶವನ್ನು ಕರಾವಳಿ ಪ್ರದೇಶದ ಕೂಡುರಸ್ತೆ ಹಾಗೂ ಸಂಪರ್ಕ ರಸ್ತೆಗಳ ಅಭಿವೃದ್ಧಿ ಕಾರ್ಯಕ್ಕಾಗಿ ಉಪಯೋಗಿಸುಲಾಗುವುದು.

ಬಾಗಲಕೋಟೆ ಜಿಲ್ಲೆಯ ಐತಿಹಾಸಿಕ ಸ್ಥಳಗಳನ್ನು ಅಭಿವೃದ್ಧಿಪಡಿಸುವುದು.

2256(3103) ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟ್) :— ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬಾಗಲಕೋಟೆ ಜಿಲ್ಲೆಯ ಐತಿಹಾಸಿಕ ಸಾಂಸ್ಕೃತಿಕ ಸ್ಥಳಗಳಾದ ಐಹೊಳೆ ಪಟ್ಟದಕಲ್ಲು , ಬಾದಾಮಿ, ಗುಹೆಗಳು ಕೂಡಲಸಂಗಮದಂಥ ಸಾಂಸ್ಕೃತಿಕ ಕೇಂದ್ರಗಳನ್ನು ಪ್ರವಾಸೋದ್ಯಮ ಇಲಾಖೆಯಿಂದ ಅಭಿವೃದ್ಧಿಪಡಿಸಿ ಇವುಗಳಿಗೆ ಪ್ಯಾಕೇಜ್ ಟ್ರಿಪ್ ಪ್ರವಾಸ ಯೋಜನೆ ಕೈಗೊಳ್ಳಲು ಸರ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದೇ?